

ಕ್ಯಾಮೆರಾಗೆ ಸುವ್ವಿ ಹಕ್ಕಿ ಪೋಸು



ಹಣ್ಣು ಹುಡುಕುವುದರಲ್ಲಿ ಮಗ್ನವಾದ ಗಿಳಿ



ನೀಲಿ ಮಿಂಚುಳ್ಳಿಯ ಬೇಟೆ ಹುನ್ನಾರ

# ಪುಟ್ಟ ಮಸೂರದಲ್ಲೂ ಹಕ್ಕಿ ಹಾಡು

**ಹಕ್ಕಿಗಳ ಸುಂದರ ಚಿತ್ರಗಳನ್ನು ಸೆರೆಹಿಡಿಯಲು ದುಬಾರಿ ಲೆನ್ಸ್‌ಗಳೇ ಬೇಕೆಂದೇನಿಲ್ಲ. ತಾಳ್ಮೆ, ಪ್ರೀತಿ, ಕುತೂಹಲ ಕೊಂಚ ಹೆಚ್ಚಿದ್ದರೆ ಬಾನಾಡಿಗಳೂ ಪೋಸ್ ಕೊಟ್ಟಾವು...**

**■ ಪ್ರಸಾದ ಶೆಣೈ ಆರ್.ಕೆ.**

‘ಹಕ್ಕಿ ಛಾಯಾಗ್ರಹಣ ಮಾಡೋಕೆ ಸಾಮಾನ್ಯ ಕ್ಯಾಮೆರಾ, ಲೆನ್ಸ್ (ಮಸೂರ)ಗಳಲ್ಲೆಲ್ಲ ಆಗೋದೇ ಇಲ್ಲ. ಎಂಬತ್ತು ಸಾವಿರದ ಮೇಲಿನ ಲೆನ್ಸುಗಳೇ ಬೇಕು’ ಎಂದು ನಾನು ಹವ್ಯಾಸಿ ಛಾಯಾಗ್ರಹಣ ಶುರುಮಾಡಿದ ಸಂದರ್ಭದಲ್ಲಿ ಸ್ನೇಹಿತ ಹೇಳಿದ ಮಾತಿನಿಂದ ತುಂಬಾ ನಿರುತ್ಸಾಹಗೊಂಡಿದ್ದೆ. ದುಬಾರಿ ಕ್ಯಾಮೆರಾ, ಲೆನ್ಸು ನನ್ನ ವ್ಯಾಪ್ತಿ ಪ್ರದೇಶದ ಹೊರಗಿನ ಮಾತಾಗಿ ಕಂಡು, ಹಕ್ಕಿ ಛಾಯಾಗ್ರಹಣದ ಸಹವಾಸವೇ ಬೇಡ ಎಂದು ಪಕ್ಷಿಗಳನ್ನು ಬಿಟ್ಟು ಬೇರೆಲ್ಲವನ್ನೂ ಸೆರೆಹಿಡಿಯತೊಡಗಿದೆ.

ಪಶ್ಚಿಮಘಟ್ಟದಲ್ಲಿ ಒಮ್ಮೆ ಚಾರಣಕ್ಕೆ ಹೋದಾಗ ನನ್ನ ಕ್ಯಾಮೆರಾ ಜೊತೆಗೆ ಸಿಕ್ಕಿದ ಸಾಮಾನ್ಯ ಟೆಲಿಲೆನ್ಸಿನ ಮೂಲಕ ಅಲ್ಲೆಲ್ಲೋ ಮರದ ಮೇಲೆ ಕೂತ ಕಾಜಾಣ ಹಕ್ಕಿಯನ್ನು ಸೆರೆಹಿಡಿಯಲು ಪ್ರಯತ್ನಿಸಿದೆ. ತೆಗೆದ ಫೋಟೊ ನೋಡಿದರೆ ಹಕ್ಕಿ ಕೆಲವು ಮೈಲು ದೂರವಿದ್ದ ಹಾಗೆ, ಅಸ್ಪಷ್ಟವಾಗಿ ಕಂಡು ಮತ್ತೊಮ್ಮೆ ಫೋಟೊ ನೋಡಲು ನನಗೇ ರೇಜಿಗೆಯಾಯಿತು. ಪ್ರಯತ್ನ ಬಿಡದೇ ಒಂದೊಂದೇ ಕಳ್ಳ ಹೆಜ್ಜೆಗಳನ್ನಿಡುತ್ತ ಹಕ್ಕಿ ಕ್ಯಾಮೆರಾಗೆ ಹತ್ತಿರಾಗುವವರೆಗೂ ಟಕ ಟಕ ಎಂದು ಸೆರೆಹಿಡಿಯುತ್ತಲೇ ಮುಂದೆ ಸಾಗಿದೆ. ಅಲ್ಲಿ ಕೂತ ಕಾಜಾಣ ಮಿಕಿಮಿಕಿ ನೋಡುತ್ತ, ಚೂರುಪಾರು ಹಾಡುತ್ತ, ‘ಎಷ್ಟು ಫೋಟೊ ಬೇಕಾದ್ರೂ ತೆಗಿ ಮಾರಾಯ’ ಎಂದು ತೆಪ್ಪಗೆ ಕೂತಿತ್ತು.

ಹಕ್ಕಿಯ ತಪೋಭಂಗ ಮಾಡದೆ ಹುಲ್ಲ ಮೇಲೆ ಹೂವಿನಂತೆ ನಡೆದೆ. ದೂರದಿಂದ ಹತ್ತಿರಕ್ಕೆ ಬರುತ್ತಿದ್ದಂತೆಯೇ ಏಳೆಂಟು ಫೋಟೊ ಸೆರೆಹಿಡಿದಾಗಿತ್ತು. ಈಗ ಹಕ್ಕಿ ಹೆದರದೇ, ನನ್ನನ್ನು ತೀರಾ ಗಂಭೀರವಾಗಿಯೂ ಪರಿಗಣಿಸದೆ, ‘ಇವನು ಪಾಪದವ’ ಎಂದು ನಿರ್ಧಾರ ಮಾಡಿತೋ ಏನೋ, ಇನ್ನಷ್ಟು ಗಟ್ಟಿಯಾಗಿ ಅಲ್ಲಿಯೇ ಕೂತಿತ್ತು. ಉತ್ತೇಜಿತನಾದ ನಾನು ಮರದ ತೀರಾ ಸಮೀಪಕ್ಕೆ ಹೋಗಿ ನಿಂತೆ. ಅಲ್ಲಿಂದ ಅದ್ಭುತ ಎನ್ನುವಷ್ಟು ಫೋಟೊ ಸಿಗತೊಡಗಿತು. ಆಗಲೇ ನನಗೂ ನನ್ನ ಕ್ಯಾಮೆರಾಗೂ ತೃಪ್ತಿಯಾದದ್ದು.

ಇದೇ ಕಳ್ಳ ಹೆಜ್ಜೆ ತಂತ್ರವನ್ನು ಬಳಸಿ ಒಂದಷ್ಟು ಸಾವಧಾನ, ಕೊಂಚ ಜಾಸ್ತಿ ಸಮಯ ಕೊಟ್ಟರೆ ಸಾಮಾನ್ಯ ಕ್ಯಾಮೆರಾದಲ್ಲೂ ಪರವಾಗಿಲ್ಲ ಎನ್ನಬಹುದಾದ ಹಕ್ಕಿ ಛಾಯಾಗ್ರಹಣ ಮಾಡಬಹುದು ಎನ್ನುವ ಜ್ಞಾನೋದಯ ಆಗಿದ್ದು ಆವತ್ತೇ. ಅಂದಿನಿಂದ ಇಂದಿನವರೆಗೆ ಇಂಥದ್ದೇ ಕಳ್ಳ ಹೆಜ್ಜೆ ತಂತ್ರದಿಂದ ಕೆಲವು ಚೆಂದಚೆಂದ ಹಕ್ಕಿಗಳು ಕ್ಯಾಮೆರಾ ಕಣ್ಣಿಗೆ ಸಿಕ್ಕಿವೆ. ಕಳ್ಳಹೆಜ್ಜೆಗೆ ಬೆದರಿ ನನ್ನನ್ನು ಭಯೋತ್ಪಾದಕನೆಂಬಂತೆ ತಿಳಿದು ಕ್ಯಾಮೆರಾ ಕಣ್ಣಿಗೂ ಬೀಳದೆ ಹಾರಿ ಹೋದ ಹಕ್ಕಿಗಳೂ ರಾಶಿರಾಶಿ ಇವೆ.

ನಾನು ಈ ಪ್ರಸಂಗವನ್ನು ಯಾಕೆ ಹೇಳಿದೆನೆಂದರೆ, ದೊಡ್ಡ ದೊಡ್ಡ ಲೆನ್ಸುಗಳಿಂದಲೇ ಹಕ್ಕಿ ಛಾಯಾಗ್ರಹಣ ಮಾಡಲು ಸಾಧ್ಯ ಎನ್ನುವ ಭ್ರಮೆ ನಮ್ಮ ನಡುವಿದೆ. ಇದು ಪೂರ್ತಿ ನಿಜವೇನೂ ಅಲ್ಲ. ಮನಸ್ಸು ಮಾಡಿದರೆ, ಕೊಂಚ ತಾಳ್ಮೆ ವಹಿಸಿದರೆ, ಸಾಮಾನ್ಯ ಕ್ಯಾಮೆರಾ ಲೆನ್ಸುಗಳನ್ನು ಬಳಸಿಯೂ ಹಕ್ಕಿಗಳ ಜೀವನಕ್ರಮಗಳನ್ನು ಅರ್ಥ ಮಾಡಿಕೊಳ್ಳುತ್ತಲೇ ಉತ್ಕೃಷ್ಟ ಮಟ್ಟದಲ್ಲಲ್ಲದಿದ್ದರೂ ನಮಗೆ ನಾವೇ ಬೆರಗಾಗುವಂತೆ, ಒಂದಷ್ಟು ಮಂದಿಯಾದರೂ ಆಹಾ ಎನ್ನುವಂಥ ಚಿತ್ರಗಳನ್ನು ತೆಗೆಯಲು ಸಾಧ್ಯ ಎನ್ನುವುದಕ್ಕೋಸ್ಕರ ಇಷ್ಟೆಲ್ಲಾ ಹೇಳಬೇಕಾಯಿತು.

ದೊಡ್ಡ ದೊಡ್ಡ ಲೆನ್ಸ್‌ನಿಂದ ನಿಂತಲ್ಲೇ ನಿಂತು ಹಕ್ಕಿಗಳ ಫೋಟೊ ತೆಗೆಯೋದು ಒಂಥರಾ ಮನೆಯಲ್ಲಿಯೇ ಕೂತು ತಿಂಡಿಗೆ ಆರ್ಡರ್ ಮಾಡಿದ ಹಾಗೆ. ಅಂದರೆ ಎಲ್ಲವೂ ನಾವಿದ್ದಲ್ಲೇ ಬಂದು ಬಿಡುತ್ತದೆ. ಇದೇ ರೀತಿ ದೊಡ್ಡ ಲೆನ್ಸಿನಿಂದ ಎಷ್ಟು ದೂರದ ಚಿತ್ರಗಳನ್ನಾದರೂ ಹತ್ತಿರಕ್ಕೆ ತಂದುಕೊಳ್ಳಬಹುದು. ಇದರಲ್ಲಿ ಸಿಗುವ ತಾಳ್ಮೆ, ಕುತೂಹಲ, ಸವಾಲುಗಳು ಕೊಂಚ ಕಡಿಮೆಯೇ. ಅಲ್ಲದೆ ಹಕ್ಕಿಗಳ ಛಾಯಾಗ್ರಹಣಕ್ಕೋಸ್ಕರವೇ



ಕ್ಯಾಮೆರಾ ಕಣ್ಣಿಗೆ ಹರಟೆಮಲ್ಲ ಬಿದ್ದಾಗ...